## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು

**ಃಸಿ.ಸಿ. ಸಂಖ: 481ಃ2021**

ಪಿರ್ಯಾದಿ ಃ ಶ್ರೀ ಮಂಜುನಾಥ ಪಿ.ಜಿ. ಬಿನ್ ಗುರುಮೂರ್ತಿ,
32 ವರ್ಷ ವಯಸ್ಸು, ಸಿದ್ದರಹಳ್ಳಿ,
ಹಾಲಿ ವಾಸಃ ಆಡುವಳ್ಳಿ ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು.

ವಿರುದ್ಧ

ಆರೋಪಿ ಃ ಶ್ರೀ ಪ್ರವೀಣ ಬಿನ್ ಕುಮಾರ ಎಸ್.ವೈ.
28 ವರ್ಷ ವಯಸ್ಸು ,
ಬನಶಂಕರಿ ಪರ್ನಿಚರ್ ಸ್ಟೋರ್,
ಚನ್ನೇಗೌಡ ಬೀದಿ, ಬೇಲೂರು ಟೌನ್,
ಬೇಲೂರು ತಾಲ್ಲೂಕು.

**ಃ ಆರೋಪಣೆಯ ಸಾರಾಂಶ ಃ**

ಆರೋಪಿಯಾದ ನೀವು ದಿನಾಂಕಃ 20-10-2020 ರಂದು ಪಿರ್ಯಾದುದಾರರ ಹತ್ತಿರ ಬಂದು ನಿಮ್ಮ ದರದ್ದು ನಿಮಿತ್ತ ಅಂದರೆ ಫರ್ನಿಚರ್ ಅಂಗಡಿ ಮಾಡಲು ಮತ್ತು ಕೈಸಾಲವನ್ನು ತೀರಿಸುವ ಸಲುವಾಗಿ ಪಿರ್ಯಾದುದಾರನ ಹತ್ತಿರ ರೂ.2,90,000/- ಹಣದ ಅವಶ್ಯಕತೆ ಇದೆ ಕೊಡಿ ಎಂದು ಕೇಳಿದ್ದು, ಅದರಂತೆ ಪಿರ್ಯಾದುದಾರರು ಆರೋಪಿಯಾದ ನಿಮಗೆ ಅಂದೆ ನಗದಾಗಿ ರೂ.2,90,000/- ಗಳನ್ನು ಸಾಲವಾಗಿ ನೀಡಿದ್ದು, ಸದರಿ ಸಾಲ ಮರುಪಾವತಿ ಮಾಡುವ ಉದ್ದೇಶದಿಂದ ಆರೋಪಿಯಾದ ನೀವು ಖಾತೆ ಹೊಂದಿರುವ ವಿಜಯಾ ಬ್ಯಾಂಕ್ ಈಗಿನ ಬ್ಯಾಂಕ್ ಆಫ್ ಬರೋಡಾ, ಬೇಲೂರು ಶಾಖೆಯ ಚೆಕ್ ನಂಃ 369088ರ ರೂ.2,90,000/- ಮೊತ್ತದ ಚೆಕ್‌ನ್ನು ದಿನಾಂಕಃ 22-01-2021 ಕ್ಕೆ ನಮೂದಿಸಿ ಕೊಟ್ಟಿದ್ದು, ಪಿರ್ಯಾದುದಾರರು ಸದರಿ ಚೆಕ್‌ನ್ನು ನಗಧೀಕರಿಸಿಕೊಳ್ಳುವ ಉದ್ದೇಶದಿಂದ ಸದರಿ ಬ್ಯಾಂಕ್ ಗೆ ಹಾಜರುಪಡಿಸಿದಾಗ ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ದಿನಾಂಕಃ 27-01-2021 ರಂದು ಬಂದ ಹಿಂಬರಹದ ಮೇರೆಗೆ ಆರೋಪಿಯಾದ

ನಿನಗೆ ದಿನಾಂಕಃ 01–02–2021 ರಂದು ಚೆಕ್ ನಗಧೀಕರಣಗೊಳ್ಳದ ಸಂಗತಿಯನ್ನು ನೊಂದಾಯಿತ ಅಂಚೆಯ ನೋಟೀಸಿನ ಮೂಲಕ ಕಳಹಿಸಿದ್ದು, ಸದರಿ ನೋಟೀಸ್ ನೀವು ತೆಗೆದುಕೊಳ್ಳದೇ ನಾಟ್ ಕ್ಲೈಮಡ್ ಎಂದು ವಾಪಸ್ಸು ಬಂದಿರುತ್ತದೆ. ಇದರಿಂದ ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ ಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*

*ಉತ್ತರ ಃ*

*ಪ್ರಶ್ನೆ ಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*
*ಉತ್ತರಃ*

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕಃ 15–06–2022.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು